INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,87-98
Peer Reviewed Journal, Referred Journal

# ಅಂಬೇಡ್ಕರ್ ಅವರು ಸ್ಥಾಪಿಸಿದ ರಾಜಕೀಯ ಪಕ್ಷಗಳು

ಡಾ.ಎಂ.ರಾಚಪ್ಪಾಜಿ.[1]

**ಅಂ**ಬೇಡ್ಕರ್ ಅವರು ಅಸ್ಪೃಶ್ಯರ, ಶೋಷಿತರ, ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಸಮಾಜ ಪರಿವರ್ತನಾ ಮತ್ತು ವಿಮೋಚನಾ ಹಾದಿಗಳನ್ನು ಸೃಷ್ಟಿಸಬಲ್ಲಂಥ ಪ್ರಧಾನ ಹೋರಾಟಗಳನ್ನು ಪ್ರಾರಂಭಿಸಿದರು. ಯಾವುದೇ ಒಂದು ಹೋರಾಟವನ್ನು ಮಾಡಲು ಏಕ ವ್ಯಕ್ತಿಯ ಬದಲು ಅದು ಒಂದು ಸಮಾನ ಮನಸ್ಕರ ಗುಂಪು ಒಗ್ಗೂಡಿ ರಚಿಸಿಕೊಳ್ಳುವುದೇ ಸಂಘ. ಈ ಸಂಘದ ಮೂಲಕ ಕೈಗೊಳ್ಳುವ ಹೋರಾಟವೇ ಸಂಘಟನ್ಮಾಕ ಹೋರಾಟವೇ ಆಗಿರುತ್ತದೆ. ಸಂಘ ಮತ್ತು ಸಂಘಟನೆಗಳ ಬಗೆಗೆ ಅಪಾರವಾದಂಥ ಜ್ಞಾನವನ್ನು ಹೊಂದಿದಂಥ ಅಂಬೇಡ್ಕರ್ ಅವರು ಅದಕ್ಕಾಗಿ ರಾಜಕೀಯ ಪಕ್ಷಗಳನ್ನು ತಮ್ಮ ಬದುಕಿನ ಪಯಣದ ಕಾಲಾನುಕ್ರಮದಲ್ಲಿ ಹುಟ್ಟು ಹಾಕಿದವರು. ಅವುಗಳನ್ನು ಈ ಕೆಳಗಿನಂತೆ ದಾಖಲಿಸಾಗಿದೆ.

1. ಸ್ವತಂತ್ರ ಕಾರ್ಮಿಕ ಪಕ್ಷ (Independence Labour Party) – 1936
2. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ (All India Sheduled Caste Federation) – 1942
3. ರಾಜಕೀಯ ತರಬೇತಿ ಶಾಲೆ (Political Training School) 1956
4. ಭಾರತೀಯ ರಿಪಬ್ಲಿಕನ್ ಪಕ್ಷ (Republican Party of India) – 1956

ಅಂಬೇಡ್ಕರ್ ಅವರು ಸ್ಥಾಪಿಸಿದ ರಾಜಕೀಯ ಪಕ್ಷಗಳು ಮತ್ತು ಅವುಗಳ ಧ್ಯೇಯ, ಉದ್ದೇಶಗಳು ಮತ್ತು ಕಾರ್ಯಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿರುತ್ತದೆ.

**ಸ್ವತಂತ್ರ ಕಾರ್ಮಿಕ ಪಕ್ಷ** (Independence Labour Party) – 1936

ಅಂಬೇಡ್ಕರ್ ಅವರು ಸಮಾಜ ಪರಿವರ್ತನೆಯ ಚಳವಳಿಯನ್ನು ಮಾಡುವ ಸಂದರ್ಭದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ರಾಜಕೀಯ ಅಧಿಕಾರದ ಅವಶ್ಯಕತೆಯಿರುತ್ತದೆ ಎಂಬುದನ್ನು ಗ್ರಹಿಸಿದ್ದರು. ಆ ಕಾರಣವಾಗಿಯೇ ಅಂಬೇಡ್ಕರ್ ಅವರು ಅವರ ಸಹಪಾಠಿಗಳೊಡನೆ ಚರ್ಚಿಸಿ ಅಂತಿಮವಾಗಿ ಒಂದು ರಾಜಕೀಯ ಪಕ್ಷವನ್ನು ಕಟ್ಟುವ ಯೋಜನೆಯನ್ನು ರೂಪಿಸಿದರು.

[1].ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ಏಕೆಂದರೆ, ಭಾರತೀಯರು ಮತ್ತು ಬ್ರಿಟಿಷ್ ಪ್ರಭುತ್ವಗಳು ಲಂಡನ್ ನಗರದಲ್ಲಿ ಮೂರು ದುಂಡುಮೇಜಿನ ಸಮ್ಮೇಳನಗಳಲ್ಲಿ ಮುಖಾಮುಖಿಯಾಗಿ ಚರ್ಚಿಸಿ ಒಂದು ಹಂತದ ನಿರ್ಣಾಯಕ್ಕೆ ತಲುಪಿರುತ್ತದೆ. ಅದು ಅಂತಿಮವಾಗಿ ಬ್ರಿಟಿಷ್ ಭಾರತಕ್ಕೆ ಸಂಬಂಧಿಸಿದಂತೆ 1935ರ ಭಾರತ ಸರ್ಕಾರ ಕಾಯಿದೆಯನ್ನು ಜಾರಿಗೆ ತಂದಿರುತ್ತದೆ. ಈ ಕಾಯಿದೆ ಅನುಷ್ಠಾನದಿಂದಾಗಿ ಪ್ರಾಂತೀಯ ಸರ್ಕಾರಗಳಿಗೆ ಚುನಾಚಣೆಯೂ ಕೂಡ ಘೋಷಣೆಯಾಗಿರುತ್ತದೆ. ಈ ಚುನಾವಣೆಯಲ್ಲಿ ಸ್ಪರ್ಧೆಮಾಡಬೇಕಾದರೆ, ಒಂದು ರಾಜಕೀಯ ಪಕ್ಷದ ಅವಶ್ಯಕತೆಯಿರುತ್ತದೆ. ಆದ್ದರಿಂದಲೇ ಅಂಬೇಡ್ಕರ್ ಮತ್ತು ಅವರ ಸಹಪಾಠಿಗಳು ಸೇರಿಕೊಂಡು ಸ್ಥಾಪಿಸಿದ್ದಂಥ ಪಕ್ಷವೇ **ಸ್ವತಂತ್ರ ಕಾರ್ಮಿಕ ಪಕ್ಷವಾಗಿ 1936ನೇ ಆಗಸ್ಟ್ 15ರಂದು** ಚುನಾವಣಾ ಆಯೋಗದಿಂದ ಅಧಿಕೃತವಾಗಿ ನೋಂದಾಯಿತಗೊಂಡಿರುತ್ತದೆ. ಈ ಸ್ವತಂತ್ರ ಕಾರ್ಮಿಕ ಪಕ್ಷವೂ ತನ್ನ ಚುನಾವಣಾ ಪ್ರಣಾಳಿಕೆಯನ್ನು ತಯಾರಿಸಿರುತ್ತದೆ. ಅದನ್ನು ಈ ಮುಂದಿನಂತೆ ಸವಿಸ್ತಾರವಾಗಿ ಚರ್ಚಿಸಲಾಗಿರುತ್ತದೆ.

ಸ್ವತಂತ್ರ ಕಾರ್ಮಿಕ ಪಕ್ಷದ ಸ್ಥಾಪನೆಯ ಪ್ರಧಾನ ಉದ್ದೇಶವೆಂದರೆ; ಭೂರಹಿತರ, ಬಡಗೇಣಿದಾರರ, ವ್ಯವಸಾಯಗಾರರ ಮತ್ತು ಕಾರ್ಮಿಕರ ಸಮಸ್ಯೆಗಳನ್ನು ಮತ್ತು ಅವರ ಕುಂದುಕೊರತೆಗಳ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿ ಅವುಗಳನ್ನು ಪರಿಹರಿಸುವುದು. ಈ ಸ್ವತಂತ್ರ ಕಾರ್ಮಿಕ ಪಕ್ಷವು ನಾಲ್ಕು ಪ್ರಧಾನ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತದೆ. ಅವುಗಳೇ ಈ ಪಕ್ಷದ ಘನ ಉದ್ದೇಶಗಳೂ ಕೂಡ ಆಗಿರುತ್ತವೆ. ಅವುಗಳೆಂದರೆ; ಆರ್ಥಿಕ ಕಾರ್ಯಕ್ರಮಗಳು, ಸಾಮಾಜಿಕ ಕಾರ್ಯಕ್ರಮಗಳು, ಶೈಕ್ಷಣಿಕ ಕಾರ್ಯಕ್ರಮಗಳು, ಆಡಳಿತಾತ್ಮಕ ಕಾರ್ಯಕ್ರಮಗಳು.

**ಆರ್ಥಿಕ ಕಾರ್ಯಕ್ರಮಗಳು**

1. ಕೃಷಿ ಉತ್ಪಾದನೆಯನ್ನು ಅಧಿಕಗೊಳಿಸುವ ಉದ್ದೇಶದಿಂದ ಭೂ ಅಡಮಾನ ಬ್ಯಾಂಕ್ ವ್ಯವಸಾಯೋತ್ಪನ್ನ ಸಹಕಾರ ಸಂಘಗಳು ಮತ್ತು ಮಾರಾಟ ಸಂಘಗಳನ್ನು ಸ್ಥಾಪಿಸುವುದು.
2. ಬಂಡವಾಳವನ್ನು ಹೂಡಲು ಮತ್ತು ಸುಧಾರಿತ ಕೃಷಿ ಉತ್ಪಾದನಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಭೂಹಿಡುವಳಿಗಳ ಗಾತ್ರವೂ ಚಿಕ್ಕದಾಗಿರುವುದು ಬಹುದೊಡ್ಡ ಅಡಚಣೆಗಳಾಗುತ್ತವೆ.
3. ಜನರಲ್ಲಿರುವ ಸಾಮರ್ಥ್ಯವನ್ನು ಮತ್ತು ಆರ್ಥಿಕ ವಸ್ತುಗಳ ಉತ್ಪಾದನಾ ಕೌಶಲ್ಯವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಜನರಿಗೆ ದೊಡ್ಡ ಪ್ರಮಾಣದಲ್ಲಿ ತಾಂತ್ರಿಕ ಶಿಕ್ಷಣವನ್ನು ನೀಡಲು ಪ್ರಯತ್ನಿಸುವುದು.
4. ಜನತೆಯ ಹಿತದೃಷ್ಟಿಯಿಂದ ಅಗತ್ಯವಿರುವಂಥ ಸಂದರ್ಭದಲ್ಲಿ ಕೈಗಾರಿಕೆಗಳ ಮೇಲೆ ಸರ್ಕಾರದ ಒಡೆತನವನ್ನು ಮತ್ತು ಕೈಗಾರಿಕೆಗಳಲ್ಲಿ ಸರ್ಕಾರದ ಆಡಳಿತವನ್ನು ಸಮರ್ಥಿಸುವುದು.

5. ಜನತೆಯ ಸ್ವತಂತ್ರ ಮತ್ತು ದೀರ್ಘಾವಧಿಯ ಜೀವನದ ಮಾರ್ಗದಲ್ಲಿರುವ ಎಲ್ಲಾ ಅಡಚಣೆಗಳನ್ನು ನಿವಾರಿಸಲು ಮತ್ತೇ ಅದಕ್ಕೆ ಸಹಾಯಕವಾಗುವಂತೆ ಆರ್ಥಿಕ ವ್ಯವಸ್ಥೆಗೆ ಸೂಕ್ತ ಬದಲಾವಣೆಗಳನ್ನು ತರುವುದಕ್ಕೆ ಮತ್ತು ಯಾವುದೇ ಸಮುದಾಯದಕ್ಕೆ ಅಥವಾ ಪಂಗಡಕ್ಕೆ ನ್ಯಾಯವನ್ನು ನೀಡದ ವ್ಯವಸ್ಥೆಗಳನ್ನು ರದ್ದು ಮಾಡುವುದಕ್ಕೆ ಶ್ರಮಿಸುವುದು.
6. ಭೂ ಮಾಲೀಕರು ಗೇಣಿದಾರರನ್ನು ಸುಲಿಗೆ ಮಾಡುವುದನ್ನು ಮತ್ತು ಗೇಣಿಯಿಂದ ಅವರನ್ನು ಬಿಡಿಸುವುದನ್ನು ಸಾಮಾನ್ಯವಾಗಿ ಅದರಲ್ಲಿಯೂ ಖೋತಿ ಪದ್ಧತಿಯ ಪ್ರಕಾರ, ಪಡೆದು ಗೇಣಿದಾರರಿಗೆ ರಕ್ಷಣೆಯನ್ನು ನೀಡಲು ಸೂಕ್ತ ಶಾಸನಗಳನ್ನು ರೂಪಿಸುವುದು.
7. ನಾಗರಿಕ ಸಮಾಜದಲ್ಲಿ ಗೌರವಯುತವಾಗಿ ಜೀವನವನ್ನು ನಡೆಸುವ ಕನಿಷ್ಠ ಜೀವನ ಮಟ್ಟವನ್ನು ಕೃಷಿ ಹಾಗೂ ಕಾರ್ಖಾನೆಗಳ ಕೆಲಸಗಾರರಿಗೆ ದೊರಕಿಸಿಕೊಡಲು ಶ್ರಮಿಸುವುದು.
8. ಕೈಗಾರಿಕಾ ಕಾರ್ಮಿಕರ ಅನುಕೂಲಕ್ಕಾಗಿ ನೇಮಕಾತಿ, ವಜಾ, ಬಡ್ತಿ, ಕೆಲಸದ ಅವಧಿ, ಕನಿಷ್ಠ ವೇತನ, ಸಂಬಳದ ಸಹಿತವಾದ ರಜೆ, ಸಾಧ್ಯವಾದ ಎಲ್ಲಾ ಅನುಕೂಲಗಳು, ಬೋನಸ್ ನೀಡಿಕೆ, ನಿವೃತ್ತಿ ವೇತನ ಮತ್ತು ಇತರ ನಿವೃತ್ತಿಗೆ ಸಂಬಂಧಿಸಿದ ವಿಷಯಗಳು, ಇವುಗಳಿಗೆ ಸಂಬಂಧಿಸಿದ ಹಾಗೇ, ಶಾಸನಗಳನ್ನು ಜಾರಿಗೆ ತರಲು ಪ್ರಯತ್ನಿಸುವುದು. ಕೆಲಸಗಾರರಿಗೆ ಕಾಯಿಲೆ, ನಿರುದ್ಯೋಗ ಮತ್ತು ಅಪಘಾತಗಳ ವಿರುದ್ಧ ಸಾಮಾಜಿಕ ವಿಮಾ ಯೋಜನೆಗಳನ್ನು ಜಾರಿಗೆ ತರಲೂ ಪ್ರಯತ್ನಿಸುವುದು.
9. ಕೈಗಾರಿಕಾ ಕಾರ್ಮಿಕರಿಗೆ ನೀಡಿದಷ್ಟೇ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕೃಷಿ ಕ್ಷೇತ್ರಕ್ಕೆ ಅನುಗುಣವಾಗಿ ಮಾಡಬೇಕಾದ ಬದಲಾವಣೆಗಳೊಂದಿಗೆ ಕೃಷಿ ಕಾರ್ಮಿಕರಿಗೂ ವಿಸ್ತರಿಸಲೂ ಪ್ರಯತ್ನ ಮಾಡುವುದು.
10. ನಿರುದ್ಯೋಗವನ್ನು ನಿವಾರಿಸುವುದು ಸರಕಾರದ ಜವಾಬ್ದಾರಿ ಎಂಬುದನ್ನು ಒಪ್ಪಿಕೊಳ್ಳುವುದು ಮತ್ತೇ ಈ ಉದ್ದೇಶದ ಈಡೇರಿಕೆಗಾಗಿ ಭೂ ವರ್ಗಾವಣೆಯನ್ನು ಜಾರಿಗೆ ತರುವ ಮತ್ತು ನಿರುದ್ಯೋಗಿ ಹಾಗೂ ಭೂ ರಹಿತ ಕಾರ್ಮಿಕರಿಗಾಗಿ ಲೋಕೋಪಯೋಗಿ ಕಾರ್ಯವನ್ನು ಜಾರಿಗೆ ತರುವ ನೀತಿಯನ್ನು ಒಪ್ಪಿಕೊಳ್ಳುವುದು.
11. ಸಾಲ ನೀಡುವವರು ಸಾಲಗಾರರಿಂದ ಸಾಲವನ್ನು ವಸೂಲಿ ಮಾಡಲು ನ್ಯಾಯವಲ್ಲದ ಮಾರ್ಗ ಅನುಸರಿಸುವುದನ್ನು, ದುಬಾರಿ ಬಡ್ಡಿ ವಿಧೀಸುವುದನ್ನು, ವಂಚನೆಯ ಮಾರ್ಗಗಳನ್ನು ಅನುಸರಿಸುವುದನ್ನು ತಡೆಯಲು ಮತ್ತು ಗ್ರಾಮಾಂತರಗಳಲ್ಲಿರುವ ಋಣಭಾರದ ಸಮಸ್ಯೆಯನ್ನು ನಿವಾರಿಸಲು ಶಾಸನಗಳನ್ನು ರೂಪಿಸಿ ಜಾರಿಗೆ ತರುವುದು.

12. ದೊಡ್ಡ ದೊಡ್ಡ ನಗರಗಳ ಮತ್ತು ಪಟ್ಟಣ ಪ್ರದೇಶಗಳ ಕೈಗಾರಿಕಾ ಕೇಂದ್ರಗಳಲ್ಲಿ ವಾಸಿಸುತ್ತಿರುವ ಕೆಳ ಮಧ್ಯಮ ಜನವರ್ಗದವರಿಗೆ ಸೂಕ್ತ ರಕ್ಷಣೆಯನ್ನು ನೀಡಲು ಶಾಸನಗಳನ್ನು ರೂಪಿಸಿ ಜಾರಿಗೆ ತರಲು ಬದ್ಧವಾಗಿರುವುದು.

**ಸಾಮಾಜಿಕ ಸುಧಾರಣಾ ಕಾರ್ಯಕ್ರಮಗಳು / ಶಾಸನಾತ್ಮಕ ಯೋಜನೆಗಳು**

1. ಸಮಾಜದಲ್ಲಿ ಅಗತ್ಯ ಇರುವಂಥ ಎಲ್ಲಾ ಸಾಮಾಜಿಕ ಸುಧಾರಣೆಗಳನ್ನು ತರುವುದು.

   ಅ. ದೇಶದಲ್ಲಿನ ಸಂಪ್ರದಾಯಸ್ಥರು ಸಮಾಜ ಸುಧಾರಕರನ್ನು ಬಹಿಷ್ಕರಿಸುವುದನ್ನು ತಪ್ಪಿಸುವುದು.

   ಆ. ತಮಗೆ ಕಾನೂನು ನೀಡಿರುವ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಯಾವುದೇ ವರ್ಗದವರಾಗಲೀ, ವ್ಯಕ್ತಿಯಾಗಲೀ ಬಳಸಿಕೊಳ್ಳುವುದನ್ನು ತಡೆಯಲು ಇತರರು ಉಂಟುಮಾಡುವ ಭಯೋತ್ಪಾದನೆಯನ್ನು ಹಾಕುವ ಸಾಮಾಜಿಕ ಬಹಿಷ್ಕಾರ ಮೊದಲಾದಂಥ ವ್ಯವಸ್ಥಿತ ಪ್ರಯತ್ನಗಳನ್ನು ನಿವಾರಿಸುವ ನಿಟ್ಟಿನಲ್ಲಿ ಶಾಸನಗಳನ್ನು ರಚಿಸುವ ಉದ್ದೇಶವನ್ನು ಹೊಂದಿರುವುದು.

2. ಜನಕಲ್ಯಾಣ ಸೇವಾರ್ಥವಾಗಿ ಸಂಗ್ರಹಿಸಲಾದ ನಿಧಿಗಳ ದುರುಪಯೋಗವಾಗದಂತೆ ನೋಡಿಕೊಳ್ಳಲು ಹಾಗೂ ನಿಗಧಿತ ಉದ್ದೇಶಗಳಿಗೆ ಅಗತ್ಯವಾದುದ್ದಕ್ಕಿಂತ ಹೆಚ್ಚಿನ ಹಣವನ್ನು ವಿದ್ಯಾಭ್ಯಾಸದಂಥ ಧರ್ಮನಿಪೇಕ್ಷ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲು ಸಹಾಯವಾಗುವಂತೆ ಮಾಡಲು ಶಾಸನವನ್ನು ರೂಪಿಸಿ ಜಾರಿಗೆ ತರುವುದು.

3. ಭಿಕ್ಷುಕರು ಮತ್ತಿತರ ನಿರ್ಗಗತಿಕರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸೂಕ್ತ ರೀತಿಯ ಶಾಸನಗಳನ್ನು ರೂಪಿಸಿ ಜಾರಿಗೆ ತರಲು ಶ್ರಮಿಸುವುದು.

4. ಗ್ರಾಮಾಂತರ ಪ್ರದೇಶಗಳಲ್ಲಿನ ಜನ ಜೀವನವು ಉಲ್ಲಾಸಕರವಾಗುವಂತೆ ಮಾಡಲು ಅಗತ್ಯವಾದ ಸವಲತ್ತುಗಳನ್ನು ಕಲ್ಪಿಸಿಕೊಡಲು ಪ್ರಯತ್ನಿಸುವುದು.

5. ಗ್ರಾಮಗಳಲ್ಲಿನ ನೈರ್ಮಲ್ಯ ಹಾಗೂ ವಸತಿ ಸೌಕರ್ಯಗಳನ್ನು ಒದಗಿಸಲು ನಗರ ಯೋಜನೆಗಳಂತೆಯೇ ಗ್ರಾಮ ಯೋಜನೆಗಳನ್ನು ರೂಪಿಸಿ ಜಾರಿಗೆ ತರುವುದಕ್ಕಾಗಿ ಹೆಚ್ಚಿನ ರೀತಿಯಲ್ಲಿ ಶ್ರಮಿಸುವುದು.

6. ಗ್ರಾಮಗಳಲ್ಲಿ ಆಧುನಿಕ ಮನೋಭಾವವನ್ನು ಹುಟ್ಟಿಸಲು ಮತ್ತು ಅಲ್ಲಿನ ಜನರಲ್ಲಿ ಪ್ರಗತಿಪರ ಆಲೋಚನೆಗಳನ್ನು ಮೂಡಿಸಲು ಗ್ರಂಥಾಲಯಗಳನ್ನು, ಗ್ರಾಮಭವನಗಳನ್ನು, ಗ್ರಾಮಗಳಲ್ಲಿ ರೇಡಿಯೋಗಳನ್ನು ಮತ್ತು ಸಿನಿಮಾಗಳನ್ನು ಸ್ಥಾಪಿಸಲು ಎಲ್ಲಾ ರೀತಿಯಲ್ಲೂ ಪ್ರಯತ್ನಗಳನ್ನು ಮಾಡುವುದು.

**ಶೈಕ್ಷಣಿಕ ಕಾರ್ಯಕ್ರಮಗಳು**

1. ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಯೋಜನೆಗಳನ್ನು ಜಾರಿಗೆ ತರಲು ಶ್ರಮಿಸುವುದು.
2. ಎಲ್ಲಾ ಜನತೆಗೂ ಶಿಕ್ಷಣವು ದೊರಕುವಂತೆ ಮಾಡಲು ವಯಸ್ಕರ ಶಿಕ್ಷಣ ಯೋಜನೆಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತದೆ.
3. ತಾಂತ್ರಿಕ ಶಿಕ್ಷಣವನ್ನು ನೀಡವಲ್ಲಿ ವಿಶೇಷ ಗಮನವನ್ನು ಹರಿಸುತ್ತದೆ.
4. ಶೈಕ್ಷಣೀಕವಾಗಿ ಹಿಂದುಳಿದ ಜನವರ್ಗಗಳಲ್ಲಿನ ಯೋಗ್ಯ ವ್ಯಕ್ತಿಗಳಿಗೆ ಭಾರತದಲ್ಲಿ ಅಥವಾ ಹೊರ ದೇಶಗಳಲ್ಲಿ ಉನ್ನತ ಶಿಕ್ಷಣವನ್ನು ದೊರಕಿಸಿಕೊಡಲು ಪ್ರಯತ್ನಪಡುತ್ತದೆ.
5. ಪ್ರಾಂತ್ಯಗಳಲ್ಲಿ ಸ್ಥಳೀಯ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ಮತ್ತು ಅವುಗಳನ್ನು ಬೋಧಕ ವಿಶ್ವವಿದ್ಯಾನಿಲಯಗಳನ್ನಾಗಿಸಿ, ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ಮಾನ್ಯ ಮಾಡಲು ಅಗತ್ಯವಾದ ಕಾನೂನುಗಳನ್ನು ರೂಪಿಸಲು ಪ್ರಯತ್ನಿಸುತ್ತದೆ. ಹಾಗೆಯೇ, ವಿದ್ಯಾರ್ಥಿಗಳ ಬುದ್ಧಿವಂತಿಕೆ ಮತ್ತು ಶ್ರಮವನ್ನು ವ್ಯರ್ಥಮಾಡುವ ಪರೀಕ್ಷಾ ಕ್ರಮವನ್ನು ತೆಗೆದುಹಾಕಲು ಇದೊಂದೇ ಸೂಕ್ತಮಾರ್ಗವೆಂದು ಭಾವಿಸುತ್ತದೆ.

**ಆಡಳಿತತ್ಮಾಕ ಕಾರ್ಯಕ್ರಮಗಳು**

1. ಆಡಳಿತವು ಉತ್ತಮವಾಗಿ ಸಮರ್ಥವಾಗಿ ಮತ್ತು ಭ್ರಷ್ಠಚಾರದಿಂದ ಮುಕ್ತವಾಗಿ ಇರುವಣತೆ ಪ್ರಯತ್ನಿಸುವುದು.
2. ಉತ್ತಮ ಆಡಳಿತವನ್ನು ನೀಡುವ ಉದ್ದೇಶದಿಂದ;

   ಅ. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲು

   ಆ. ಈಗಿರುವ ವತನ್‌ದಾರಿ ವ್ಯವಸ್ಥೆಯನ್ನು ಆರ್ಥಿಕ ಕಾರ್ಯಕ್ಕೆ ಹೊಂದುವಂತೆ ಬದಲಾಯಿಸಲು ಶ್ರಮಿಸುವುದು.
3. ಆಡಳಿತವು ಯಾವುದೇ ಜಾತಿಯ ಅಥವಾ ಜನಸಮುದಾಯದ ಏಕಸ್ವಾಮ್ಯಕ್ಕೆ ತುತ್ತಾಗದಂತೆ ಮಾಡಲು ಶ್ರಮಪಡುವುದು. ಮತ್ತೇ, ಪ್ರಾಂತೀಯ ಆಡಳಿತದಲ್ಲಿ ಎಲ್ಲಾ ಜಾತಿ ಮತ್ತು ಜನಸಮುದಾಯಗಳ ಸಮುಚಿತವಾದ ಮಿಶ್ರಣವಿರುವಂತೆ ನೋಡಿಕೊಳ್ಳಲು ತನ್ನ ಅಧಿಕಾರದ ಪೂರ್ಣಾವಧಿಯಲ್ಲಿ ಸಂಪೂರ್ಣ ಸಾಮರ್ಥ್ಯದಿಂದ ಪ್ರಯತ್ನಿಸುತ್ತದೆ.

ಅಂಬೇಡ್ಕರ್ ಅವರು ಈ ದೇಶದ ಮೂಲನಿವಾಸಿ ಜನವರ್ಗಗಳಿಗೆ ಒಂದು ರಾಜಕೀಯ ನೆಲೆಯನ್ನು ಕಲ್ಪಿಸಿಕೊಡುವ ದೃಷ್ಟಿಯಿಂದಲೇ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಕಟ್ಟಿ ಚುನಾವಣೆಯನ್ನು ಎದುರಿಸಿ ಅದರ ಕಾರ್ಯಚರಣೆಯ ಮೂಲಕ ಒಂದು ರಾಜಕೀಯ ಪಕ್ಷ ಯಾವ ಮಾದರಿಯಲ್ಲಿ ತನ್ನ ಕಾರ್ಯನಿರ್ವಹಿಸಿ ದೇಶ ಮತ್ತು ತನ್ನ ಜನವರ್ಗವನ್ನು ಕಾಪಾಡಿಕೊಳ್ಳಬೇಕು ಎಂದೂ ಪ್ರಾಯೋಗಿಕವಾಗಿಯೇ ಈ ಅಸಮಾನತೆಯ ಭಾರತೀಯ ಮನಸ್ಸುಗಳಿಗೆ ಸ್ವತಂತ್ರ್ಯ ಪೂರ್ವ ಮತ್ತು

ಅನಂತದ ರಾಜಕಾರಣಕ್ಕೆ ತೋರಿಸಿಕೊಟ್ಟವರು. ಸಂಖ್ಯೆ ಬಲದಲ್ಲಿ ಕಡಿಮೆ ಇರುವ ಕಾರಣವಾಗಿ 1937ರ ಮುಂಬಾಯಿ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ವಿರೋಧ ಪಕ್ಷದ ಕೆಲಸವೇನು ಎಂಬುದನ್ನು ಈ ರಾಷ್ಟ್ರಕ್ಕೇ ಒಬ್ಬ ರಾಜಕೀಯ ವಿಜ್ಞಾನಿಯಾಗಿ ಸಾದರಪಡಿಸಿದವರು ಅಂಬೇಡ್ಕರ್. ಇದನ್ನು ಪ್ರಸ್ತುತ ರಾಜಕಾರಣದಲ್ಲಿ ಮಾದರಿಯಾಗಿ ತೆಗೆದುಕೊಳ್ಳುವ ಮನಸ್ಸುಗಳ ಇಲ್ಲದೇ ಇರುವ ಕಾರಣ ಇನ್ನೂ ಕೂಡ ಬಡತನ, ನಿರುದ್ಯೋಗದಂಥ ಜ್ವಲಂತ ಸಮಸ್ಯೆಗಳು ಅಭಿವೃದ್ಧಿಗೆ ತಡೆಗೋಡೆಗಳೇ ಆಗಿವೇ ಎಂದು ಹೇಳಬಹುದು.

**ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ**

(All India Sheduled Caste Federation) – 1942ನೇ ಜುಲೈ 19

ಅಂಬೇಡ್ಕರ್ ಅವರು ಎರಡನೇ ಹಂತದ ರಾಜಕಾರಣಕ್ಕಾಗಿ ಸ್ಥಾಪಿಸಿ ರಾಜಕೀಯ ಪಕ್ಷವೇ **ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ**ವೆಂದು ಗುರುತಿಸಬಹುದು. ಅಂಬೇಡ್ಕರ್ ಅವರು ಅಖಿಲ ಭಾರತವನ್ನು ಒಳಗೊಂಡಂತೆ ಒಂದು ರಾಜಕೀಯ ಸಂಘಟನೆಯನ್ನು ಕಟ್ಟಲು ಯೋಜಿಸಿದ್ದರು. ಏಕೆಂದರೆ, ಬ್ರಿಟಿಷ್ ಪ್ರಭುತ್ವವು ಕಾಲಾನುಕ್ರಮದಲ್ಲಿ ಭಾರತಕ್ಕೆ ಕೆಲವು ರಾಜಕೀಯ ಸುಧಾರಣೆಗಳನ್ನು ತರುತ್ತಲೇ ಬಂದಿರುತ್ತದೆ. ಮತ್ತೇ ಭಾರತೀಯ ಸ್ವಾತಂತ್ರ್ಯದ ಚಳವಳಿಯೂ ಕೂಡ ಒಂದು ನಿರ್ಣಾಯ ಹಂತವನ್ನು ತಲುಪಿರುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರದಲ್ಲಿನ ವಿವಿಧ ಜನಾಂಗಗಳ ನಾಯಕರು ರಾಜಕೀಯ ಸಂಘಟನೆಗಳನ್ನು ಸ್ಥಾಪಿಸಿಕೊಂಡು ಕಾರ್ಯಪ್ರವೃತ್ತರಾಗಿರುತ್ತಾರೆ. ಇದನ್ನು ಗ್ರಹಿಸಿದ್ದಂಥ ಅಂಬೇಡ್ಕರ್ ಅವರು ಸ್ವತಂತ್ರ ಕಾರ್ಮಿಕ ಪಕ್ಷದ ಅಡಿಯಲ್ಲಿಯೇ ಚರ್ಚಿಸಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟವನ್ನು ಸ್ಥಾಪಿಸಿ ಆ ಮೂಲಕವಾಗಿ ಮುಂದಿನ ದಿನಗಳಲ್ಲಿ ರಾಜಕಾರಣ ಮಾಡಲು ಸಜ್ಜಾಗಿದ್ದರು. ಆದ್ದರಿಂದಲೇ **1944ನೇ ಜುಲೈ 19ರಂದು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟವನ್ನು** ನೋಂದಾಯಿಸಿದ್ದರು. ಈ ಒಕ್ಕೂಟದ ಸಂವಿಧಾನವೂ 14 ಭಾಗಗಳನ್ನೂ, 31 ವಿಧಿಗಳನ್ನು ಹೊಂದಿರುತ್ತದೆ. ಅದರಲ್ಲಿನ ಭಾಗ-2, ವಿಧಿ-20ರಲ್ಲಿ ಈ ಒಕ್ಕೂಟದ ಧ್ಯೇಯ, ಉದ್ದೇಶಗಳು ಹಾಗೂ ಅಧಿಕಾರಗಳನ್ನು ಈ ಮುಂದಿನಂತೆ ದಾಖಲೀಕರಿಸಲಾಗಿದೆ. ಅವುಗಳೆಂದರೆ;

**ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಧ್ಯೇಯ ಮತ್ತು ಉದ್ದೇಶಗಳು**

1. ಭಾರತದ ಪರಿಶಷ್ಟ ಜಾತಿ ಜನವರ್ಗಗಳನ್ನು ಸಂಘಟಿಸುವುದು, ಅವರನ್ನು ವಿದ್ಯಾವಂತರನ್ನಾಗಿಸುವುದು. ಅವರಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯವನ್ನು ಉದ್ದಿಸುವುದು ಮತ್ತು ತನ್ನ ಕಲ್ಯಾಣ ಮತ್ತು ಅಭಿವೃದ್ಧಿಗಳಿಗಾಗಿ ಪರಿಶ್ರಮಪಡುವಂತೆ ಮಾಡುವುದು.

2. ಪರಿಶಿಷ್ಟ ಜಾತಿ ಜನವರ್ಗಗಳಿಗೆ ಅವಕಾಶಗಳಲ್ಲಿ ಸಮಾನತೆಯನ್ನು ಪಡೆದುಕೊಳ್ಳುವಂತೆ ಮಾಡುವುದು ಮತ್ತು ತಮ್ಮೂಲಕ ಸಮಾಜದ ಇತರ ನಾಗರಿಕರೊಂದಿಗೆ ಸಮಾನ ಅಂತಸ್ತನ್ನು ಹಂಚಿಕೊಳ್ಳುವಂತೆ ಮಾಡುವುದು.
3. ಪರಿಶಿಷ್ಟ ಜಾತಿಗಳವರಲ್ಲಿ ಕೃಷಿಯಲ್ಲಿ ನಿರತರಾಗಿರುವವರನ್ನು ಭೂಹೀನ ಶ್ರಮಿಕರನ್ನು ಹಾಗೂ ಕಾರ್ಖಾನೆಗಳ ಕೆಲಸಗಾರರನ್ನು ಸಂಘಟಿಸುವುದು.
4. ಶಾಲೆಗಳನ್ನು ತೆರೆಯುವುದು, ಕಲೆ ಮತ್ತು ಕೌಶಲ ಕಸಬುಗಳ ಬಗೆಗೆ ಬೋಧಿಸುವುದು. ಇತ್ಯಾದಿ ವಿದ್ಯಾಭ್ಯಾಸ ಕ್ಷೇತ್ರದ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು.
5. ಪರಿಶಿಷ್ಟ ಜಾತಿಗಳವರ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯಕವಾಗುವ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
6. ದೇಶದಲ್ಲಿನ ಭಾಗಗಳಲ್ಲಿ ಪರಿಶಿಷ್ಟ ಜಾತಿಗಳವರ ಮೇಲೆ ನಡೆಯುವ ದೌರ್ಜನ್ಯ ಹಾಗೂ ತುಳಿತಗಳನ್ನು ದಾಖಲಿಸುವುದು.

**ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧಿಕಾರಗಳು**

1. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟಕ್ಕಾಗಿ ಆಸ್ತಿಯನ್ನು ಕೊಳ್ಳಲು, ಭೋಗ್ಯದ ಆಧಾರದ ಮೇಲೆ ತೆಗೆದುಕೊಳ್ಳುವುದು ಹಾಗೂ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಹಣವನ್ನು ಕಾಲದಿಂದ ಕಾಲಕ್ಕೆ ನಿರ್ಧರಿಸಿದ ಹಾಗೆ ತೊಡಗಿಸುವುದು ಅಥವಾ ವಿನಿಯೋಗ ಮಾಡುವುದು.
2. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟಕ್ಕಾಗಿ ಮನೆಗಳು, ಕಟ್ಟಡಗಳು ಅಥವಾ ಇತರ ಕಾಮಗಾರಿಗಳನ್ನು ಮಾಡುವುದು, ಕಟ್ಟುವುದು, ದುರಸ್ಥಿ ಮಾಡುವುದು ಹಾಗೂ ಪುನರ್ ನಿರ್ಮಾಣ ಮಾಡುವುದು, ಬದಲಾವಣೆ ಮಾಡುವುದು ಅಥವಾ ಪುನರ್‌ಜ್ಜೀವನಗೊಳಿಸುವುದು ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು.
3. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಎಲ್ಲಾ ಆಸ್ತಿಗಳನ್ನು ಅಥವಾ ಯಾವುದೇ ಆಸ್ತಿಯನ್ನು ಮಾರುವುದು, ವಿಲೇವಾರಿ ಮಾಡುವುದು, ಅಭಿವೃದ್ಧಿಗೊಳಿಸುವುದು, ಬದಲಾಸುವುದು, ಭೋಗ್ಯಕ್ಕೆ ನೀಡುವುದು, ಆಧಾರವಾಗಿ ನೀಡುವುದು, ಪರಭಾರೆ ಮಾಡುವುದು ಇತ್ಯಾದಿ.
4. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಯಾವುದೇ ಉದ್ದೇಶ ಗುರಿ ಮತ್ತು ಧ್ಯೇಯವನ್ನು ಸಾಧಿಸಲು ಹಣವನ್ನು ಆಸ್ತಿಯ ಆಧಾರದ ಮೇಲೆ ಅಥವಾ ಯಾವುದೇ ಆಧಾರವಿಲ್ಲದೇ ಪಡೆಯುವುದು.

5. ಭಾರತದ ಯಾವುದೇ ಭಾಗದಲ್ಲಾಗಲೀ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟವನ್ನು ನೋಂದವಣೆಯನ್ನು ಮಾಡಿಸುವುದು ಅಥವಾ (ಸಂಬಂಧಿಸಿದ ಪ್ರಾಧಿಕಾರದಿಂದ) ಮಾನ್ಯತೆಯನ್ನು ಪಡೆಯುವುದು.
6. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಈ ಮೇಲೆ ಸೂಚಿಸಿರುವ ಧ್ಯೇಯ, ಉದ್ದೇಶಗಳು ಹಾಗೂ ಅಧಿಕಾರಗಳನ್ನು ಸಾಧಿಸಲು ಅಗತ್ಯವಾದ ಆನುಷಂಗಿಕವಾದ ಸಹಾಯಕವಾದ ಯಾವುದೇ ಅಥವಾ ಎಲ್ಲಾ ನ್ಯಾಯ ಸಮ್ಮತವಾದ ಕಾರ್ಯಗಳನ್ನು ಮಾಡುವುದು.

**ರಾಜಕೀಯ ತರಬೇತಿ ಶಾಲೆ – 1956**

1952ರಲ್ಲಿ ಭಾರತದ ಸಂಸತ್ತಿನಲ್ಲಿ ಪ್ರೊ.ಕೆ.ಟಿ.ಷಾ ಅವರು ದೇಶದ ಉನ್ನತ ಅಧಿಕಾರವನ್ನು ಹೊಂದಿರುವ ಸಂಸತ್ತು ಮತ್ತು ರಾಜ್ಯಗಳ ಶಾಸನಸಭೆಗಳಿಗೆ ಆಯ್ಕೆಯಾಗುವಂಥ ಜನಪ್ರತಿನಿಧಿಗಳಿಗೆ ಯಾವುದಾದರೂ ಔಪಚಾರಿಕ ವಿದ್ಯಾರ್ಹತೆಗಳು ಇರಬೇಕು ಎಂಬ ಒಂದು ಗೊತ್ತುವಳಿಯನ್ನು ಮಂಡಿಸಿದ್ದರು. ಆವಾಗ ಅಂಬೇಡ್ಕರ್ ಅವರು ರಾಜ್ಯಸಭಾ ಸದಸ್ಯರಾಗಿ ಪ್ರಪ್ರಥಮ ಕಾನೂನು ಸಚಿವರಾಗಿ ಆ ಗೊತ್ತುವಳಿಯ ಬಗೆಗೆ ಪ್ರತಿಕ್ರಿಯೆಯನ್ನು ನೀಡುತ್ತಾ; ಕನಿಷ್ಠ ಔಪಚಾರಿಕ ವಿದ್ಯಾರ್ಹತೆಯ ಬದಲಿಗೆ, ಚುನಾವಣೆಗೆ ಸ್ಪರ್ಧಿಸುವವರು ಪ್ರಜ್ಞಾವಂತರಾಗಿರಬೇಕು ಮತ್ತು ಶೀಲವಂತರಾಗಿರಬೇಕು ಎಂದು ಸೂಚಿಸಿದರು. ಅಂಬೇಡ್ಕರ್ ಅವರು ಅಂದು ಮಾಡಿದಂಥ ಭಾಷಣದ ಸಾರಾಂಶವನ್ನು ಈ ಕೆಳಗಿನಂತೆ ದಾಖಲಿಸಲಾಗಿದೆ. ಅದೇನೆಂದರೆ;

1. ಕೇವಲ ಶಿಕ್ಷಣವು ಈ ಸದನದ ಸದಸ್ಯತ್ವಕ್ಕೆ ಮಾನದಂಡವಾಗಲಾರದು ಎಂದು ಅಂಬೇಡ್ಕರ್ ಅವರು ಬುದ್ಧಗುರುವಿನ ತತ್ತ್ವಗಳನ್ನು ಉದ್ಧರಿಸುತ್ತಾ; ಒಬ್ಬ ಮನುಷ್ಯನಿಗೆ ಎರಡು ವಿಷಯಗಳ ಅಗತ್ಯವಿರುತ್ತದೆ. ಒಂದು – **ಜ್ಞಾನ,** ಮತ್ತೊಂದು – **ಶೀಲ**.

**ಭಾರತೀಯ ರಿಪಬ್ಲಿಕನ್ ಪಕ್ಷ** [Republican Party of India] – 1956

ಅಂಬೇಡ್ಕರ್ ಅವರು ಸ್ಥಾಪಿಸಿರುವ ಈ **ಭಾರತೀಯ ರಿಪಬ್ಲಿಕನ್ ಪಕ್ಷ**ವೂ ಪ್ರಧಾನವಾಗಿ ಸ್ವಾತಂತ್ರ್ಯ, ಸಮಾನತೆ, ಸೋದರತ್ವ ಮತ್ತು ನ್ಯಾಯಗಳನ್ನು ಪ್ರತಿನಿಧಿಸತ್ತದೆ. ಏಕೆಂದರೆ, ಸ್ವತಂತ್ರ್ಯ ಮತ್ತು ಸ್ವತಂತ್ರ್ಯ ಅನಂತರದ ಭಾರತದಲ್ಲಿ ಯಾವುದೇ ಒಂದು ರಾಜಕೀಯ ಪಕ್ಷವೂ ಈ ಮಾದರಿಯ ತತ್ತ್ವಗಳು ಮತ್ತು ಆದರ್ಶಗಳನ್ನು ಆಳವಡಿಸಿಕೊಂಡು, ಇವುಗಳ ಅನುಷ್ಠಾನಕ್ಕಾಗಿ ಸ್ಥಾಪಿತಗೊಂಡಿರುವುದಿಲ್ಲ ಎಂದೇ ಹೇಳಬಹುದು. ಇವುಗಳೆಲ್ಲವನ್ನು ಬಹುಸೂಕ್ಷ್ಮವಾಗಿಯೇ ಗ್ರಹಿಸಿದಂಥ ಅಂಬೇಡ್ಕರ್ ಅವರು ಭಾರತ ಸಂವಿಧಾನದ ಆದರ್ಶನೀಯ ತತ್ತ್ವಗಳನ್ನೇ ಆಧರಿಸಿ **ಭಾರತೀಯ ರಿಪಬ್ಲಿಕನ್ ಪಕ್ಷ**ವನ್ನು ಸ್ಥಾಪಿಸಲು ನೀಲಿ ನಕ್ಷೆಯೊಂದನ್ನು ತಯಾರಿಸಿದ್ದರು. ಆದರೆ, ಈ ರಾಜಕೀಯ ಪಕ್ಷವು ಸ್ಥಾಪಿತವಾಗುವ ಮೊದಲೇ ಮಹಾಪರಿನಿಬ್ಬಾಣವನ್ನು ಹೊಂದಿದರು. ಅಂಬೇಡ್ಕರ್ ಅವರು

ಅನುಯಾಯಿಗಳು ಅನಂತರ ಅಂದರೆ, 1957ನೇ ಅಕ್ಟೋಬರ್ 03ರಂದು ಸ್ಥಾಪಿಸಿ ಕಾರ್ಯವನ್ನು ಆರಂಭಿಸಿರುವುದು ಕಂಡುಬಂದಿರುತ್ತದೆ.

ಅಂಬೇಡ್ಕರ್ ಅವರು ಪ್ರಬುದ್ಧ ಭಾರತ ಪತ್ರಿಕೆಯಲ್ಲಿ ಭಾರತದಲ್ಲಿ ರಿಪಬ್ಲಿಕನ್ ಪಕ್ಷದ ಸ್ಥಾಪನೆಗಾಗಿ ಭಾರತೀಯರಿಗೆ ಒಂದು ಮುಕ್ತ ಪತ್ರ ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟಗೊಂಡಿರುತ್ತದೆ. ಅದುವೇ ಈ ಮುಂದಿನಂತೆ ಇರುವ ಐದು ಅಧ್ಯಾಯಗಳಲ್ಲಿ ಒಳಗೊಂಡಿರುತ್ತದೆ. ಅವುಗಳೆಂದರೆ;

ಅಧ್ಯಾಯ: 1 – ಒಂದು ಚಳವಳಿಯು ರಾಜಕೀಯ ಪಕ್ಷವಾಗಿ ಹೇಗೆ ರೂಪುಗೊಳ್ಳುತ್ತದೆ?

ಅಧ್ಯಾಯ: 2 – ಪ್ರಜಾಪ್ರಭುತ್ವವು ಯಶಸ್ವಿಯಾಗಿ ಕೆಲಸ ಮಾಡಲು ಅಗತ್ಯವಾದ ಪೂರ್ವ ಪರಿಸ್ಥಿತಿಗಳು

ಅಧ್ಯಾಯ: 3 – ಸಂಸದೀಯ ಸರಕಾರಕ್ಕೆ ವಿರೋಧ ಪಕ್ಷಗಳು ಏಕೆ ಅಗತ್ಯವಾಗಿರುತ್ತವೆ?

ಅಧ್ಯಾಯ: 4 – ಪಕ್ಷವೆಂದರೆ ಏನು?

ಅಧ್ಯಾಯ: 5 – ಪಕ್ಷದ ಧ್ಯೇಯ ಮತ್ತು ಉದ್ದೇಶಗಳು

ಹೀಗೆ, ಈ ಮೇಲಿನ ಐದು ಅಧ್ಯಾಯಗಳಲ್ಲಿ ಅಂಬೇಡ್ಕರ್ ಅವರು ಸ್ಥಾಪಿಸಲು ಉದ್ದೇಶಿಸಿದ್ದಂಥ ರಾಜಕೀಯ ಪಕ್ಷವೇ ಆಗಿರುವ ಭಾರತೀಯ ರಿಪಬ್ಲಿಕನ್ ಪಕ್ಷದ ರೂಪುರೇಷಗಳೇ ಆಗಿರುತ್ತವೆ.

ವಿಶ್ವದ ರಾಜಕೀಯ ಮುತ್ಸದ್ಧಿಗಳು ಮತ್ತು ಚಿಂತಕರಲ್ಲಿ ಪ್ರಮುಖರು, ಮಹಾನಾಯಕರು, ಸಾಮಾಜಿಕ ಪರಿವರ್ತನಾ ಕ್ರಾಂತಿಕಾರರೂ ಮತ್ತು ಸಂವಿಧಾನ ರಚನೆಯ ಪ್ರಧಾನಶಿಲ್ಪಿಯಾಗಿರುವಂಥ ಅಂಬೇಡ್ಕರ್ ಅವರು ಸ್ಥಾಪಿಸಿದ ಭಾರತೀಯ ರಿಪಬ್ಲಿಕನ್ ಪಕ್ಷವೂ ಅಖಿಲ ಭಾರತೀಯ ರಾಜಕೀಯ ಪಕ್ಷವೇ ಆಗಿರುತ್ತದೆ. ಈ ರಾಜಕೀಯ ಪಕ್ಷದ ಮೂಲಕ ಅಂಬೇಡ್ಕರ್ ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಆಧಾರದ ಮೇಲೆ ಭಾರತದ ಸಮಾನವನ್ನು ಪುನರ್ ನಿರ್ಮಾಣವನ್ನು ಮಾಡಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಹಾಗೆಯೇ, ಈ ಭಾರತೀಯ ರಿಪಬ್ಲಿಕನ್ ಪಕ್ಷವು ಈ ಮಹತ್ವದ ಉದ್ದೇಶಗಳಿಗಾಗಿ ತನ್ನನ್ನು ತಾನೇ ಸಮರ್ಪಿಸಿಕೊಳ್ಳುತ್ತದೆ. ಅದನ್ನು ಈ ಮುಂದಿನಂತೆ ಇರುವ ಅಂಶಗಳು ಪ್ರಸ್ತುತ ಪಡಿಸುತ್ತವೆ. ಅವುಗಳೆಂದರೆ;

1. ದೇಶದಲ್ಲಿಯ ಸಮಷ್ಟಿ ಜನತೆಯ ಮತ್ತು ವೈಯಕ್ತಿಕವಾಗಿ ಪ್ರಜಾಪ್ರಭುತ್ವವು ಅತ್ಯುತ್ತಮ ಆಡಳಿತ ವ್ಯವಸ್ಥೆಯೇ ಆಗಿದ್ದು, ಅದನ್ನು ಈ ಪಕ್ಷವೂ ಪ್ರಮುಖವಾಗಿ ಬೆಂಬಲಿಸುತ್ತದೆ.
2. ದೇಶದ ಆಡಳಿತದಲ್ಲಿ ಜಾತ್ಯತೀತತೆಯನ್ನು ಸಮರ್ಥಿಸುತ್ತದೆ.
3. ಒಂದು ರಾಜಕೀಯ ಪಕ್ಷವು ಒಂದು ಸೈನ್ಯವಿದ್ದಂತೆ, ಅದರ ಮುಖ್ಯಸ್ಥರು ಪ್ರಧಾನ ಸೇನಾಧಿಪತಿ ಇದ್ದಂತೆ, ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಸೈನಿಕರಿದ್ದಂತೆ. ಇವರು ಕಾಯಕ ನಿಷ್ಠರಾಗಿ ಕೆಲಸವನ್ನು ಮಾಡಿದರೆ, ಆ ರಾಜಕೀಯ ಪಕ್ಷವೂ ಅಧಿಕಾರಕ್ಕೆ ಬರುತ್ತದೆ.

**ಭಾರತೀಯ ರಿಪಬ್ಲಿಕನ್ ಪಕ್ಷದ ಪ್ರಧಾನ ಉದ್ದೇಶಗಳು**

ಭಾರತೀಯ ರಿಪಬ್ಲಿಕನ್ ಪಕ್ಷವು ಈ ಕೆಳಕಂಡಂಥ ಪ್ರಧಾನ ಉದ್ದೇಶಗಳನ್ನು ಹೊಂದಿರುತ್ತದೆ. ಅವುಗಳೆಂದರೆ;

**ಭಾರತ ಸಂವಿಧಾನದ ಪೀಠಿಕಾ ಭಾಗದಲ್ಲಿ ಸೂಚಿಸಲಾಗಿರುವ:** "ಭಾರತದ ಪ್ರಜೆಗಳಾದ ನಾವು ಭಾರತವು ಒಂದು ಪ್ರಜಾಪ್ರಭುತ್ವ ಗಣರಾಜ್ಯವನ್ನಾಗಿ ವ್ಯವಸ್ಥೆಗೊಳಸುವುದಕ್ಕಾಗಿಯೂ; ಮತ್ತು ಸಮಸ್ತ ಪ್ರಜೆಗಳಿಗೆ – ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು, ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮ, ಮತ್ತು ಉಪಾಸನೆ – ಇವುಗಳಲ್ಲಿ ಸ್ವಾತಂತ್ರ್ಯವನ್ನು, ಸ್ಥಾನಮಾನಗಳಲ್ಲಿ ಮತ್ತು ಅವುಗಳಿಗಿರುವ ಅವಕಾಶಗಳಲ್ಲಿ ಸಮಾನತೆಯನ್ನು ಹಾಗೂ ವ್ಯಕ್ತಿ ಗೌರವ, ರಾಷ್ಟ್ರದ ಏಕತೆಯ ಆಶ್ವಾಸನೆ ಮತ್ತು ಭ್ರಾತೃತ್ವದ ಭಾವನೆಯನ್ನು ನೀಡುವುದಕ್ಕೆ ದೃಢಸಂಕಲ್ಪ ಮಾಡಿ – ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ಇಂದು ಎಂದರೆ; ನವೆಂಬರ್ 26ನೇ, 1949ರಲ್ಲಿ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿದ್ದೇವೆ, ಕಾನೂನುಬದ್ಧಗೊಳಸಿದ್ದೇವೆ ಮತ್ತು ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ".

ಭಾರತ ಸಂವಿಧಾನದ ಈ ಪೀಠಿಕೆಯಲ್ಲಿ ದಾಖಲಾಗಿರುವಂಥ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ – ಇವುಗಳನ್ನು ಸಾಧಿಸುವುದು ಈ ಪಕ್ಷದ ಪ್ರಧಾನ ಉದ್ದೇಶಗಳೇ ಆಗಿರುತ್ತವೆ. ಇವುಗಳನ್ನು ಪಕ್ಷದ ಧ್ಯೇಯ ಮತ್ತು ಉದ್ದೇಶಗಳಾನ್ನಾಗಿ ಇಟ್ಟುಕೊಂಡು, ಸಾರ್ವಜನಿಕ ವ್ಯವಹಾರಗಳಲ್ಲಿ ಪಕ್ಷವು ಈ ಮುಂದಿನಂತೆ ಇರುವ ನೀತಿಗಳನ್ನು ಅನುಸರಿಸತಕ್ಕದ್ದು; ಅವುಗಳೆಂದರೆ;

1. ಪಕ್ಷವು ಪ್ರತಿಯೊಬ್ಬ ಭಾರತೀಯರನ್ನೂ ಕಾನೂನಿನ ಮುಂದೆ ಸಮಾನರು ಎಂದು ಪರಿಗಣಿಸತಕ್ಕದ್ದು, ಇದು ಅಷ್ಟೇ ಅಲ್ಲದೇ, ಪ್ರತಿಯೊಬ್ಬರಿಗೂ ಸಮಾನತೆಯ ಹಕ್ಕು ಇರುವುದರಿಂದ ಸಮಾನತೆಯ ಅಭಾವವು ಇರುವಕಡೆಯಲ್ಲಿ ಹಾಗೂ ಸಮಾನತೆಯ ಅವಕಾಶವನ್ನು ನಿರಾಕರಿಸಲಾಗಿರುವಂಥ ಪರಿಸ್ಥಿತಿಯಲ್ಲಿ ಇಂಥ ಸಮಾನತೆಯನ್ನು ಬೆಳೆಸುವುದು.
2. ಅಭಿವೃದ್ಧಿಯನ್ನು ಹೊಂದಲು ಇರುವಂಥ ಆತನ ಹಕ್ಕುಗಳನ್ನುಳ್ಳ ಪ್ರತಿಯೊಬ್ಬ ಭಾರತೀಯನನ್ನೇ ಧ್ಯೇಯವಾಗಿ ಇಟ್ಟುಕೊಂಡು ಅದನ್ನು ಸಾಧಿಸಲು ಭಾರತೀಯ ರಿಪಬ್ಲಿಕನ್ ಪಕ್ಷವು ಸರಕಾರವನ್ನು ಸಾಧನವನ್ನಾಗಿಸಿಕೊಳ್ಳುವುದು.
3. ಇತರ ವ್ಯಕ್ತಿಗಳ ಹಾಗೂ ದೇಶದ ಹಿತವನ್ನು ಕಾಪಾಡುವುದಕ್ಕೋಸ್ಕರವಾಗಿರುವ ಕೆಲವು ಮಿತಿಗಳಿಗೆ ಒಳಪಟ್ಟು ಪ್ರತಿಯೊಬ್ಬ ಭಾರತೀಯನ ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಗಳನ್ನು ಪಕ್ಷವು ಕಾಪಾಡುವುದು.

4. ಇಲ್ಲಿಯವರೆಗೂ ಸಮಾನತೆಯ ರುಚಿಯನ್ನೇ ಕಾಣದವರಿಗೆ ಆದ್ಯತೆಯನ್ನು ನೀಡುವುದರ ಜೊತೆಗೆ, ಪ್ರತಿಯೊಬ್ಬ ಭಾರತೀಯನಿಗೂ ಸಮಾನ ಅವಕಾಶಗಳನ್ನು ನೀಡುವಂತೆ ಪಕ್ಷವು ಮಾಡುವುದು.
5. ಪ್ರತಿಯೊಬ್ಬ ಭಾರತೀಯನ ಎಲ್ಲಾ ಅವಶ್ಯಕತೆಗಳನ್ನೂ ಪೂರೈಸಿ ಅವನನ್ನು ಭಯಮುಕ್ತನನ್ನಾಗಿಸುವಲ್ಲಿ ಸರಕಾರವು ಸದಾ ಎಚ್ಚರದಿಂದಿರುವಂತೆ ಪಕ್ಷವು ಮಾಡುವುದು.
6. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ಕಾಪಾಡಿಕೊಂಡು ಬರುವಂತೆ ಒತ್ತಡವನ್ನು ಪಕ್ಷವು ಹೇರುವುದು. ಒಬ್ಬರು ಮತ್ತೊಬ್ಬರ ಮೇಲೆ, ಒಂದು ವರ್ಗವು ಮತ್ತೊಂದು ವರ್ಗದ ಮೇಲೆ ಹಾಗೂ ಒಂದು ದೇಶವು ಮತ್ತೊಂದು ದೇಶದ ಮೇಲೆ ದಬ್ಬಾಳಿಕೆ ನಡೆಸುವುದನ್ನು ಮತ್ತು ಶೋಷಿಸುವುದನ್ನು ಪಕ್ಷವು ತಪ್ಪಿಸುತ್ತದೆ.
7. ದೇಶದ ಹಾಗೂ ವ್ಯಕ್ತಿಗಳ ವೈಯಕ್ತಿಕ ಹಿತದೃಷ್ಟಿಯಿಂದ ಸಂಸದೀಯ ಸರಕಾರದ ವ್ಯವಸ್ಥೆಯು ಉಳಿದೆಲ್ಲಾ ವ್ಯವಸ್ಥೆಗಿಂತ ಉತ್ತಮವಾಗಿರುವ ಕಾರಣದಿಂದ ಈ ವ್ಯವಸ್ಥೆಯನ್ನು ಪಕ್ಷವು ಸಮರ್ಥಿಸುವುದು.

ಈ ಮಾದರಿಯ ಉದ್ದೇಶಗಳನ್ನು ಅಳಡಿಸಿಕೊಂಡು ಅಂಬೇಡ್ಕರ್ ಅವರು ಭಾರತೀಯ ರಿಪಬ್ಲಿಕನ್ ಪಕ್ಷವನ್ನು ಸ್ಥಾಪಿಸಿದ್ದರು. ಆದರೆ, ಅಂಬೇಡ್ಕರ್ ಅವರ ಪರಿನಿಬ್ಬಾಣದ ಅನಂತರ ನಾಯಕತ್ವದ ಪ್ರಶ್ನೆಯೂ ಸೃಷ್ಟಿಕೊಂಡು ಪಕ್ಷವು ವಿಭಜಿತಗೊಂಡಿರುತ್ತದೆ. ಪ್ರಸ್ತುತ ಹಲವು ಬಣಗಳಾಗಿಯೇ ಈ ಪಕ್ಷವು ಇರುವುದು ಕಂಡುಬರುತ್ತದೆ. ಮತ್ತೇ ಈ ಪಕ್ಷದ ರಾಮದಾಸ್ ಅಟವಾಳೆ ಅವರು ನೇತೃತ್ವದ ಒಂದು ಬಣವು ಭಾರತೀಯ ಜನತಾ ಪಕ್ಷದ ಬೆಂಬಲಿತವಾಗಿ ಕೇಂದ್ರ ಸರ್ಕಾರದ ಅಂಗ ಪಕ್ಷವೇ ಆಗಿರುತ್ತದೆ.

ಒಟ್ಟಾರೆಯಾಗಿ ಹೇಳುವುದೇ ಆದರೆ; ಅಂಬೇಡ್ಕರ್ ಅವರು ತಮ್ಮ ಸಾರ್ವಜನಿಕ ಬದುಕಿನಲ್ಲಿ ಸಮಾಜ ಪರಿವರ್ತನೆಗಾಗಿ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಶಿಕ್ಷಣ, ಧಾರ್ಮಿಕದಂಥ ಮಹತ್ವದ ಆಂದೋಲನಗಳನ್ನು ನಡೆಸಲು ಕಾಲಕಾಲಕ್ಕೆ ಸ್ಥಾಪಿಸಿರುವ ಸಂಘ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳ ಹಲವು ಹತ್ತು. ಅವುಗಳಲ್ಲಿ ಪ್ರಧಾನವಾದವುಗಳನ್ನು ಈ ಮೇಲಿನಂತೆ ವಿವರಿಸಲಾಗಿದೆ. ಅವುಗಳಿಂದ ಈ ಕೆಳಕಂಡಂಥ ಪ್ರಮುಖ ಅಂಶಗಳು ಕಂಡುಬಂದಿರುತ್ತವೆ. ಅವುಗಳೆಂದರೆ;

1. ಅಂಬೇಡ್ಕರ್ ಅವರು ಭಾರತದ ಚರಿತ್ರೆಯಲ್ಲಿಯೇ ವಿಶಿಷ್ಟವಾದ ಸ್ಥಾನವನ್ನು ತಮ್ಮದಾಗಿಸಿಕೊಂಡವರು. ಮತ್ತೇ ಭಾರತದಲ್ಲಿ ನಡೆದಿರುವ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಹೀಗೆ, ಪರಿವರ್ತನೆಯ ಚಳವಳಿಯಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿದ್ದವರೇ ಆಗಿದ್ದಾರೆ.

2. ಅಂಬೇಡ್ಕರ್ ಅವರು ರೂಪಿಸಿದ ನಾಗರಿಕ ಹಕ್ಕುಗಳ ಚಳವಳಿಗಳು ಖಿನ್ನತೆಗೆ ಒಳಗಾದಂಥ ಜನವರ್ಗಗಳ ಮಾನವಹಕ್ಕುಗಳ ಬಗೆಗೆ ಜನಜಾಗೃತಿ ಮೂಡಿಸುವ ಜವಾಬ್ದಾರಿಯನ್ನೇ ಹೊಂದಿದ್ದವು.
3. ಅಂಬೇಡ್ಕರ್ ಅವರು ಸ್ಥಾಪಿಸಿದ ವಿವಿಧ ಸಂಘ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳು ಖಿನ್ನತೆಗೆ ಒಳಗಾದಂಥ ಜನವರ್ಗಗಳ ಉನ್ನತಿಗಾಗಿ ಒಗ್ಗಟ್ಟಿನ ಪ್ರಯತ್ನಗಳ ಅಗತ್ಯವನ್ನು ಒತ್ತಿ ಹೇಳುತ್ತವೆ.
4. ಅಂಬೇಡ್ಕರ್ ಅವರು ಭಾರತ ಸಂವಿಧಾನ ರಚನೆಯಲ್ಲಿ ಪ್ರಧಾನ ಶಿಲ್ಪಿಯಾಗಿ ನಿಮ್ನವರ್ಗದವರು, ಮಹಿಳೆಯರು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹೀಗೆ ಇತರೆ ಜನವರ್ಗಗಳನ್ನು ಸಂವಿಧಾನಿಕ ಸಂರಕ್ಷಣೆಗಳನ್ನು ಕೊಡಿಸಿದವರು.
5. ಅಂಬೇಡ್ಕರ್ ಅವರು ಪರಿವರ್ತನೆಯ ಆಂದೋಲನಗಳು ಪ್ರಧಾನವಾಗಿ ಪ್ರಜಾಪ್ರಭುತ್ವ, ಸಂವಿಧಾನಾತ್ಮಕ, ಅಹಿಂಸಾತ್ಮಕ ವಿಧಾನಗಳನ್ನು ಆಧರಿಸಿದ್ದವು. ಅವುಗಳೆಲ್ಲವೂ ಸಾಂವಿಧಾನಿಕ ತಳಹದಿಯ ಆಂದೋಲನಗಳ ನಾಯಕತ್ವಕ್ಕೆ ನಾಂದಿಯಾಗಿರುತ್ತವೆ.

**ಗ್ರಂಥಋಣ**


1. **ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟಗಳು –1 ರಿಂದ 22,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, 2015
2. **ದತ್ತಾತ್ರೇಯ ಇಕ್ಕಳಕಿ** (ಸಂ), ಅಂಬೇಡ್ಕರ್ ಚಿಂತನೆ, ಸುಮೇದನ ಪ್ರಕಾಶನ, ಗುಲ್ಬರ್ಗ, 2006
3. **ದತ್ತಾತ್ರೇಯ ಪೂಜಾರಿ, ಗೀತಾ ಪೂಜಾರಿ,** (ಸಂ) ಡಾ. ಬಿ.ಆರ್. ಅಂಬೇಡ್ಕರ್ ಅವರ ಬಹಿಷ್ಕೃತ ಭಾರತದಲ್ಲಿನ ಸ್ಫುಟ ಲೇಖನಗಳು, ಸಾಗರದೀಪ ಪ್ರಕಾಶನ, ಕಾರವಾರ, 1986
4. **ಗೋಪಾಲ್.ಜಿ.** ನವಭಾರತ ನಿರ್ಮಾಪಕರು ಡಾ.ಬಿ.ಆರ್.ಅಂಬೇಡ್ಕರ್, ಸಮಕ್ಯ ಪ್ರಕಾಶನ, ಮೈಸೂರು, 2017
5. **ಗೇಲ್ ಆಮ್‌ವೆಡ್ತ್ (ಇಂಗ್ಲೀಷ್), ರಾಹು (ಅನು),** ಅಂಬೇಡ್ಕರ್ ಪ್ರಭುದ್ಧ ಭಾರತದ ದ್ರಷ್ಟಾರ, ಸುಮೇಧ ಪ್ರಕಾಶನ, ಗುಲ್ಬರ್ಗಾ, 2010
6. **ರಂಗಸ್ವಾಮಿ.ವಿ,** ಡಾ. ಬಿ.ಆರ್. ಅಂಬೇಡ್ಕರ್ ಪತ್ರಗಳು, ಲಕ್ಷ್ಮಿ ಸ್ಮಾರಕ ಪ್ರಕಾಶನ, ಬೆಂಗಳೂರು, 2006
7. **ಜಾಕೋಬ್ ಲೋಬೋ.ಸಿ.ಎಚ್,** (ಅನು) **ಜಿ.ಎಸ್.ಲೋಖಂಡೆ** (ಮೂಲ), ಭೀಮರಾವ್ ರಾಮ್‌ಜೀ ಅಂಬೇಡ್ಕರ್ (ಸಾಮಾಜಿಕ ಪ್ರಜಾಪ್ರಭುತ್ವದ ಒಂದು ಅಧ್ಯಯನ), ಸಪ್ನಬುಕ್ ಹೌಸ್, ಬೆಂಗಳೂರು, 2009
8. **ಇನಾಂದರ್.ವಿ.ಎಂ,** ಅಂಬೇಡ್ಕರ್ ವ್ಯಕ್ತಿ ಮತ್ತು ವಿಚಾರ, ಉಷಾ ಸಾಹಿತ್ಯ ಮಾಲೆ, ಮೈಸೂರು, 1995
9. **ಜವರೇಗೌಡ.ದೇ,** ಕ್ರಾಂತಿಕಾರಿ ಡಾ. ಅಂಬೇಡ್ಕರ್, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, 1978
10. **ಜವರಯ್ಯ.ಮ.ನ,** ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, 1995